ಸಾಕ್ಷಿಯನ್ನು ದಿಃ**03.03.2025** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ 2 ರಿಂದ 6 ಮತ್ತು 18 ನೇ ಪ್ರತಿವಾದಿಗಳ ಪರಃ–**

2 ರಿಂದ 6 ಮತ್ತು 18 ನೇ ಪ್ರತಿವಾದಿಯರು ಏಕಪಕ್ಷೀಯರಾಗಿದ್ದು, ಆದ್ದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ 7 ರಿಂದ 12 ನೇ ಪ್ರತಿವಾದಿಗಳ ಪರ ಶ್ರೀ ಬಿ ಎಸ್ ವೈ ವಕೀಲರಿಂದಃ–**

ನಾನು ಎಂ.ಕಾಂ ಓದಿದ್ದೇನೆ. ನಾನು ಹಾಜರುಪಡಿಸಿದ ದಾಖಲೆಗಳನ್ನು ಹೊರತುಪಡಿಸಿ ಈ ದಾವೆಗೆ ಸಂಬಂಧಿಸಿದಂತೆ ಬೇರೆ ದಾಖಲೆಗಳು ಇಲ್ಲ. ನಿಪಿ 1 ರ ಕ್ರಯದ ಕರಾರು ದಿನಾಂಕ 22.09.2014 ರಂದು ಆಗಿದೆ. 2014 ರಿಂದ 2017 ರವರೆಗೆ ಪ್ರತಿವಾದಿಯರಿಗೆ ನೋಟೀಸು ಕೊಟ್ಟ ಬಗ್ಗೆ ಅಥವಾ ಅವರನ್ನು ಸಂಪರ್ಕಿಸಿದ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ. 2016 ರಲ್ಲಿ ಪ್ರತಿವಾದಿಯರಿಗೆ ನೋಟೀಸು ಕೊಟ್ಟಿದ್ದೇನೆ. 2016 ರ ನಂತರ ನಾನು ಪ್ರತಿವಾದಿಯರಿಗೆ ಲಿಖಿತವಾಗಿ ಯಾವುದೇ ನೋಟೀಸ್ ನ್ನು ಕೊಟ್ಟಿಲ್ಲ. ಮೌಖಿಕವಾಗಿ ಕೇಳುತ್ತಾ ಬಂದಿದ್ದೇನೆ. 2017 ರಲ್ಲಿ ನಾನು ದಾವೆ ಸಲ್ಲಿಸಬೇಕಾಗಿದ್ದು, 2021 ರಲ್ಲಿ ದಾವೆ ಸಲ್ಲಿಸಿರುವ ಕಾರಣ ನನ್ನ ದಾವೆ ಕಾಲವಿಳಂಬದಿಂದ ಕೂಡಿರುವ ಕಾರಣ ಊರ್ಜಿತವಲ್ಲ ಎಂದರೆ ದಾಖಲೆಗಳು ಸರಿಯಾಗಿ ಇರದೇ ಇದ್ದುದರಿಂದ 2021 ರಲ್ಲಿ ದಾವೆ ಸಲ್ಲಿಸಿದ್ದೇನೆ. 2014 ರಲ್ಲಿ ಕ್ರಯದ ಕರಾರು ಮಾಡಿಕೊಳ್ಳುವಾಗ ಯಾವ ದಾಖಲೆಗಳು ಸರಿಯಿದ್ದವು ಯಾವ ದಾಖಲೆಗಳು ಸರಿಯಿಲ್ಲವೆಂದು ಬರೆಸಿದ್ದೀರಾ ಎಂದರೆ ಪಹಣಿ ಸರಿಯಿರಲಿಲ್ಲ, ಅದನ್ನು ದುರಸ್ತು ಮಾಡಬೇಕಾಗಿತ್ತು. ನಿಪಿ 1 ರ ಕ್ರಯದ ಕರಾರಿನಲ್ಲಿ ಪಹಣಿ ಸರಿಯಿಲ್ಲವೆಂದು ನಮೂದಿಸಲಾಗಿದೆ. ನಿಪಿ 1 ರ ಕ್ರಯದ ಕರಾರಿನಲ್ಲಿ ಪಹಣಿ ಸರಿಯಿಲ್ಲವೆಂದು ನಿಖರವಾಗಿ ಬರೆದಿಲ್ಲ.

ಮೂರು ತಿಂಗಳು ಮುಗಿಯುವ ಒಳಗಾಗಿ ನೀವು ಪ್ರತಿವಾದಿಯರಿಗೆ ಲಿಖಿತವಾಗಿ ನೋಟೀಸು ಕೊಟ್ಟಿದ್ದೀರಾ ಎಂದರೆ ಇಲ್ಲ ಮೌಖಿಕವಾಗಿ ಕೇಳಿದ್ದೇನೆ. ನಿಪಿ 1 ರಲ್ಲಿ ಕಾಣಿಸಿದಂತೆ ಮೂರು ತಿಂಗಳೊಳಗೆ ನೋಟೀಸು ಕೊಡಲು ನನಗೆ ತೊಂದರೆ ಇರಲಿಲ್ಲ. ಒಟ್ಟು 16 ಜನ ಕ್ರಯದ ಕರಾರನ್ನು ಬರೆದುಕೊಟ್ಟಿದ್ದಾರೆ.

ನಿಪಿ 1 ರ ಕ್ರಯದ ಕರಾರಿನಲ್ಲಿ 7 ರಿಂದ 12 ನೇ ಪ್ರತಿವಾದಿಯರಿಗೆ ಸ್ವತ್ತಿನಲ್ಲಿ ಎಷ್ಟು ಹಕ್ಕಿದೆ ಮತ್ತು ಆ ಬಾಬ್ತು ನಾನು ಅವರಿಗೆ ಎಷ್ಟು ಹಣ ನೀಡಿದ್ದೇನೆಂದು ಬರೆಯಲಾಗಿದೆಯೇ ಎಂದರೆ ಇಲ್ಲ. 7 ರಿಂದ 12 ನೇ ಪ್ರತಿವಾದಿಯರಿಗೆ ಕ್ರಯದ ಕರಾರಿನ ಬಾಬ್ತು ಯಾವುದೇ ಹಣವನ್ನು ಸಂದಾಯ ಮಾಡಿಲ್ಲ ಎಂದರೆ ಸರಿಯಲ್ಲ. ಅವರಿಗೆ ಹಣ ಕೊಟ್ಟ ಬಗ್ಗೆ ದಾಖಲೆ ಇದೆಯೇ ಎಂದರೆ ಓಚರ್ ಇದೆ. ಆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಗೊತ್ತಿಲ್ಲ. 7 ರಿಂದ 12 ನೇ ಪ್ರತಿವಾದಿಯರಿಗೆ ಚೆಕ್, ಡಿಡಿ ಅಥವಾ ಆನ್ ಲೈನ್ ಮೂಲಕ ಹಣ ಪಾವತಿಸಿದ್ದೀರಾ ಎಂದರೆ ಇಲ್ಲ ನಗದಾಗಿ ಕೊಟ್ಟಿದ್ದೇನೆ. ಅವರಿಗೆ ನಗದಾಗಿ ಹಣ ಕೊಟ್ಟ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಮತ್ತು ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ ಎಂದರೆ ಹಾಜರುಪಡಿಸಿದ್ದೇನೆ. ಯಾರಿಗೆ ಯಾವ ದಿನಾಂಕದಂದು ಎಷ್ಟು ಹಣ ಕೊಟ್ಟಿದ್ದೇನೆ ಎಂಬ ಬಗ್ಗೆ ವಾದ ಪತ್ರದಲ್ಲಿ ನಮೂದಿಸಿದ್ದೇನೆ. 7 ರಿಂದ 12 ನೇ ಪ್ರತಿವಾದಿಯರಿಗೆ ನಾನು ಹಣ ಕೊಡದೇ ಇದ್ದರೂ ಕೂಡ ಓಚರ್ ಇದೆ ಎಂದು ಸೃಷ್ಠಿ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈಗ ದಾವಾ ಸ್ವತ್ತುಗಳ ಪಹಣಿ ಯಾರ ಹೆಸರಿನಲ್ಲಿದೆ ಎಂದು ತಿಳಿದುಕೊಂಡಿದ್ದೇನೆ. ಆ ಬಗ್ಗೆ 2024–25 ಕ್ಕೆ ಸಂಬಂಧಿಸಿದ ಪಹಣಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ದಾವೆ ಹಾಕುವ ಅವಧಿಯ ಪಹಣಿ ಹಾಜರುಪಡಿಸಿದ್ದೆ. ನಾನು ಅಗತ್ಯ ಪಕ್ಷಗಾರರನ್ನು ನಾನು ದಾವೆಯಲ್ಲಿ ಸೇರಿಸದೇ ಇರುವ ಕಾರಣ ನನ್ನ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. 7 ರಿಂದ 12 ನೇ ಪ್ರತಿವಾದಿಯರಿಗೆ ನಿಪಿ 11 ರ ನೋಟೀಸ್ ನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ 11 ರ ನೋಟೀಸ್ ನ್ನು ತೋರಿಸಿ ಅದರಲ್ಲಿ 9 ರಿಂದ 12 ನೇ ಪ್ರತಿವಾದಿಯರ ಹೆಸರುಗಳು ಇವೆಯೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಪಿ 1 ರ ಕರಾರಿನಲ್ಲಿ 9 ರಿಂದ 12 ನೇ ಪ್ರತಿವಾದಿಯರ ಹೆಸರು ಇಲ್ಲ ಎಂದರೆ ಸರಿ. 9 ರಿಂದ 12 ನೇ ಪ್ರತಿವಾದಿಯರಿಗೆ ನಿಪಿ 1 ರ ಕ್ರಯದ ಕರಾರು ಬಾಧಕವಲ್ಲ ಎಂದರೆ ಅವರು ಮುಂದುವರೆದು ಸಹಿ ಮಾಡಿದ್ದಾರೆಂದು ನುಡಿಯುತ್ತಾರೆ. ಮುಂದುವೆದ ಕರಾರು ಪತ್ರ ಮಾಡಿಕೊಟ್ಟಿದ್ದಾರೆಯೇ ಎಂದರೆ ಹೆಚ್ಚುವರಿ ಮುಂಗಡ ಹಣ ಪಾವತಿಸಿದ್ದೇನೆ. ನಿಪಿ 2 ಮತ್ತು 3 ರ ದಾಖಲೆಗಳಲ್ಲಿ 9 ರಿಂದ 12 ನೇ ಪ್ರತಿವಾದಿಯರ ಹೆಸರು ನಮೂದಾಗಿದೆಯೇ ಎಂದರೆ ಇಲ್ಲ. ನಿಪಿ 4 ರ ದಾಖಲೆಯಲ್ಲಿ 9 ಮತ್ತು 10 ನೇ ಪ್ರತಿವಾದಿಯರ ಹೆಸರು ಇದೆಯೇ ಎಂದರೆ ಇಲ್ಲ ಉಳಿದವರ ಹೆಸರು ಇದೆ.

ನಿಪಿ 4 ರ ದಾಖಲೆಯಲ್ಲಿ 11 ಮತ್ತು 12 ನೇ ಪ್ರತಿವಾದಿಯರ ಹೆಸರನ್ನು ನಮೂದು ಮಾಡಿಲ್ಲ. ನಿಪಿ 4 ರ ದಾಖಲೆಯಲ್ಲಿ ತಿದ್ದುಪಡಿ ಮಾಡಲಾಗಿದೆಯೇ ಎಂದರೆ ಇಲ್ಲ ಸಹಿ ಹಾಕುವಾಗ ತಪ್ಪಾಗಿದೆ. ನಿಪಿ 4 ರ ದಾಖಲೆಯಲ್ಲಿ ಸಹಿ ಮಾಡಬೇಕಾದ ಜಾಗದಲ್ಲಿ ಮಾರ್ಕ್ ಮಾಡಲಾಗಿದೆ. ಆದರೆ ಅವರು ಸಹಿ ಮಾಡಿಲ್ಲ. ನಿಪಿ 4 ರ ದಾಖಲೆಯಲ್ಲಿ ಹೆಸರು ಇಲ್ಲದೇ ಇರುವ ಕಾರಣ ಹಾಗೂ ತಿದ್ದುಪಡಿ ಇರುವ ಕಾರಣ ಸದರಿ ದಾಖಲೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

7 ರಿಂದ 12 ನೇ ಪ್ರತಿವಾದಿಯರಿಗೆ ಕರಯದ ಕರಾರಿನ ಸಮಯದಲ್ಲಿ ರೂ. 2 ಲಕ್ಷ ಕೊಟ್ಟಿದ್ದೇನೆ. ದಿನಾಂಕ 28.09.2016 ರಂದು ರೂ. 2 ಲಕ್ಷ ಕೊಟ್ಟಿದ್ದೇನೆ. ದಿನಾಂಕ 04.09.2018 ರಂದು ರೂ. 3,50,000/- ಕೊಟ್ಟಿದ್ದೇನೆ. ನಿರ್ದಿಷ್ಟವಾಗಿ ಸದರಿ ಹಣವನ್ನು 7 ರಿಂದ 12 ನೇ ಪ್ರತಿವಾದಿಯರಿಗೆ ಕೊಟ್ಟಿದ್ದೀರಾ ಎಂದರೆ ಕೊಟ್ಟಿದ್ದೇನೆ. ನಿಪಿ 2 ರಿಂದ 4 ರ ದಾಖಲೆಗಳಲ್ಲಿ 7 ರಿಂದ 12 ನೇ ಪ್ರತಿವಾದಿಯರ ಸಹಿ ಇಲ್ಲ ಎಂದರೆ ಇಬ್ಬರ ಸಹಿಯನ್ನು ಹೊರತುಪಡಿಸಿ ಉಳಿದವರ ಸಹಿ ಇದೆ. 9 ನೇ ಪ್ರತಿವಾದಿಯ ಸಹಿ ಇಲ್ಲ, ಇನ್ನೊಬ್ಬರ ಹೆಸರು ಗೊತ್ತಿಲ್ಲ. ನಿಪಿ 2 ಮತ್ತು 3 ರಲ್ಲಿ 7 ನೇ ಪ್ರತಿವಾದಿಯನ್ನು ಹೊರತುಪಡಿಸಿ ಉಳಿದ 8 ರಿಂದ 12 ನೇ ಪ್ರತಿವಾದಿಯರ ಸಹಿ ಇಲ್ಲ. 8 ರಿಂದ 12 ನೇ ಪ್ರತಿವಾದಿಗಳ ಸಹಿಯಾಗಲೀ ಅವರ ಬಗ್ಗೆ ಒಕ್ಕಣೆಯಾಗಲೀ ನಿಪಿ 1 ರಿಂದ 3 ರಲ್ಲಿ ಇಲ್ಲದೇ ಇರುವ ಕಾರಣ ಸದರಿ ದಾಖಲೆಗಳು ಊರ್ಜಿತವಲ್ಲ ಎಂದರೆ ಸರಿಯಲ್ಲ.

ನಿಪಿ 1 ರ ಕ್ರಯದ ಕರಾರನ್ನು ಮಾಡಿಕೊಳ್ಳುವ ಪೂರ್ವದಲ್ಲಿ ದಾವಾ ಸ್ವತ್ತು ಯಾರಿಗೆ ಹೇಗೆ ಬಂತು ಎಂದು ದಾಖಲೆ ಪರಿಶೀಲಿಸಿದ್ದೀರಾ ಎಂದರೆ ಪರಿಶೀಲಿಸಿದ್ದೇನೆ. ಏನೇನು ದಾಖಲೆಗಳನ್ನು ಪರಿಶೀಲಿಸಿದ್ದೀರಿ ಎಂದರೆ ಆರ್ ಟಿ ಸಿ, ಎಂ ಆರ್, ಇಸಿ ಮತ್ತು ಅಟ್ಲಾಸ್ ಸ್ಕೆಚ್ ಪರಿಶೀಲಿಸಿದ್ದೇನೆ. 2014 ನೇ ಸಾಲಿನ ಪಹಣಿಯನ್ನು ಪರಿಶೀಲಿಸಿದ್ದೆ. 2014 ರಲ್ಲಿ ದಾವಾ ಸ್ವತ್ತಿನ ಸರ್ವೆ ನಂಬರ್ 81 ಆಗಿತ್ತು. ಸರ್ವೆ ನಂಬರ್ 81 ರ ಪಹಣಿಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿದ ಪಹಣಿಯಲ್ಲಿ ದಾವಾ ಸ್ವತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿತ್ತು. 1 ನೇ ಪ್ರತಿವಾದಿ ಕ್ರಯದ ಕರಾರಿಗೆ ಸಹಿ ಹಾಕಿದ್ದಾರೆ. 1 ನೇ

ಪ್ರತಿವಾದಿ ಈಗ ಮೃತಪಟ್ಟಿದ್ದಾರೆ. 1 ನೇ ಪ್ರತಿವಾದಿಯ ವಾರಸುದಾರರನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿಲ್ಲ. 1 ನೇ ಪ್ರತಿವಾದಿ ಮೃತಪಟ್ಟಿರುವ ಕಾರಣ ಅವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡದೇ ಇರುವುದರಿಂದ ಈ ದಾವೆ ಊರ್ಜಿತವಲ್ಲ ಎಂದರೆ ನಾನು ದಾವೆ ಹಾಕುವ ಕಾಲಕ್ಕೆ ದಾವಾ ಸ್ವತ್ತುಗಳನ್ನು ಹಂಚಿಕೊಂಡಿದ್ದರು. 1 ನೇ ಪ್ರತಿವಾದಿ ಮೃತಪಟ್ಟಿರುವ ಬಗ್ಗೆ ನನ್ನ ಗಮನದಲ್ಲಿದೆ. 1 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳು ಹೇಗೆ ಬಂತು ಎಂದರೆ ಪಿತ್ರಾರ್ಜಿತವಾಗಿ ಬಂತು. ಆ ಬಗ್ಗೆ ದಾಖಲೆಯನ್ನು ಪರಿಶೀಲಿಸಿದ್ದೀರಾ ಮತ್ತು ಹಾಜರುಪಡಿಸಿದ್ದೀರಾ ಎಂದರೆ ಪರಿಶೀಲಿಸಿದ್ದೇನೆ ಆದರೆ ಹಾಜರುಪಡಿಸಿಲ್ಲ. 1 ನೇ ಪ್ರತಿವಾದಿಗೂ ಹಾಗೂ 7 ರಿಂದ 12 ನೇ ಪ್ರತಿವಾದಿಯರಿಗೂ ಏನು ಸಂಬಂಧ ಎಂದು ತಿಳಿದುಕೊಂಡಿದ್ದೀರಾ ಎಂದರೆ ನಿಖರವಾಗಿ ಗೊತ್ತಿಲ್ಲ. ಪಹಣಿ 1 ನೇ ಪ್ರತಿವಾದಿಯ ಹೆಸರಿನಲ್ಲಿದ್ದ ಕಾರಣ ಯಾವ ಕಾರಣಕ್ಕಾಗಿ 7 ರಿಂದ 12 ನೇ ಪ್ರತಿವಾದಿಯರಿಗೆ ಹಣ ಕೊಟ್ಟಿದ್ದೀರಿ ಎಂದರೆ ಅವರಿಗೆ 1 ಎಕರೆ ಜಮೀನು ಬರಬೇಕಾಗಿದೆಂದು 1 ನೇ ಪ್ರತಿವಾದಿ ಹಾಗೂ ರೈತರು ಹೇಳಿದ್ದರಿಂದ ಹಣ ಕೊಟ್ಟಿದ್ದೇನೆ. 7 ರಿಂದ 12 ನೇ ಪ್ರತಿವಾದಿಯರಿಗೆ ದಾವಾ ಸ್ವತ್ತಿನಲ್ಲಿ 1 ಎಕರೆ ಸೇರಬೇಕು ಎಂಬ ಬಗ್ಗೆ ಲಿಖಿತವಾದ ದಾಖಲೆ ಇದೆಯೇ ಎಂದರೆ ಇಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.